ಅರಣ್ಯ ಇಲಾಖೆಯಲ್ಲಿ ಕಳ್ಳ ಸಾಗಾಣಿಕೆ

553 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಣ್ಯ ಇಲಾಖೆಯಲ್ಲಿ ಅರಣ್ಯ ಬೆಳೆಸುವವರೆ ಕಳ್ಳತನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ

ಆ) ಮೇಲೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆ

29 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳನ್ನು ತೆಗೆಯಲು ಸರ್ಕಾರದವರು ಅನುಮತಿ ನೀಡಲು ಪರಿಶೀಲಿಸುವರೆ?

ಆ) ರಾಜ್ಯದಲ್ಲಿ ಹೊಸ ಕಾಲೇಜುಗಳ ಅವಶ್ಯಕತೆ ಇದೆಯೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತುತ ಯಾವುದೇ ಪ್ರಸ್ತಾವನೆಯು ಸರ್ಕಾರದಲ್ಲಿ ಇರುವುದಿಲ್ಲ.

ಆ) ಸಧ್ಯಕ್ಕೆ ಇಲ್ಲ

ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು

27 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) :ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಿಗೆ ಬೇಕಾಗಿರುವ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು? ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆ?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ)

ಪ್ರಾಥಮಿಕಶಾಲೆ	ಪ್ರೌಢಶಾಲೆ
18,700	2484

(ಜಿಲ್ಲಾವಾರು ತಃಖ್ತೆ ಲಗತ್ತಿಸಿದೆ.)

ಆ) **ಪ್ರಾಥಮಿಕ ಶಾಲೆ** : ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ 18,700 ಹುದ್ದೆಗಳಲ್ಲಿ ಶೇಕಡ 50ರಷ್ಟು ಹುದ್ದೆಗಳನ್ನು ಮೊದಲನೇ ಹಂತದಲ್ಲಿ ಭರ್ತಿ ಮಾಡಲು ಈಗಾಗಲೇ ಕರಡು ನೇಮಕಾತಿ ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ. ಈ ಪ್ರಕ್ರಿಯೆ ಮುಗಿದ ನಂತರ ಉಳಿದ ಶೇಕಡ 50ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಪ್ರೌಢಶಾಲೆ : ರಾಜ್ಯದ ಪ್ರೌಢಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಸಹ ಶಿಕ್ಷಕರುಗಳ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಕೆಲವಾರು ತಿದ್ದುಪಡಿಗಳನ್ನು ಸೂಚಿಸಿ ಕರಡು ಅಧಿಸೂಚನೆಯನ್ನು

ಹೊರಡಿಸಲಾಗಿದೆ. ಈ ಬಗ್ಗೆ ಬಂದ : ಬರಲಿರುವ ಆಕ್ಷೇಪಣೆ : ಸಲಹೆಗಳನ್ನು ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

DETAILS OF VACANT POSTS OF PRIMARY & SECONDARY SCHOOL TEACHERS (DISTRICT WISE)

Sl. No.	Name of the District		Primary school	Secondary school
1)	Bangalore North	-	59	18
2)	Bangalore South	-	147	26
3)	Bangalore Rural	-	735	182
4)	Tumkur	-	776	153
5)	Kolar	-	351	123
6)	Chitradurga	-	686	48
7)	Shimoga	-	211	73
8)	Mysore	-	378	96
9)	Mandya	-	313	147
10)	Kodagu	-	136	36
11)	Hassan	-	384	166
12)	Chikkamagalur	-	186	86
13)	Dakshina Kannada	-	912	451
14)	Belgaum	-	722	255
15)	Bijapur	-	576	34
16)	Dharwad	-	1213	178
17)	Uttara Kannada	-	385	54
18)	Gulbarga	-	404	215
19)	Bidar	-	595	63
20)	Raichur	-	310	64
21)	Bellary	-	495	16
			9974	2484

a)	Posts sanctioned under DPEP (Mandya-60, Kolar-60, Raichur & Belgaum)	-	530
b)	Posts sanction during the year 95-96		5000
c)	Posts sanctioned under Operation Black Board scheme 5th and 6th phases.	-	3196
	TOTAL	-	18700

(ಮಂಡಿಸಲಾಯಿತು)

ಅಧ್ಯಕ್ಷರ ತೀರ್ಪುಗಳು

ಅಧ್ಯಕ್ಷರು : ಇದರ ಜೊತೆಗೆ 2 ರೂಲಿಂಗ್ಸ್ ಇವೆ. ಅವುಗಳನ್ನು ಕೊಟ್ಟು ಬಿಡುತ್ತೇನೆ. ಅನಂತರ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ ಪ್ರಾರಂಭವಾಗುತ್ತದೆ.

ಸದನದ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರ ಮೇಲೆ ಮಾಡಿರುವ ಆರೋಪದ ಬಗ್ಗೆ

ಸನ್ಮಾನ್ಯ ವಿರೋಧ ಪಕ್ಷಕ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ದಿನಾಂಕ 7-8-1995ರಂದು ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ ಇವರ ನೇತೃತ್ವದ ಸರ್ಕಾರದ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ಪ್ರತಿಪಾದಿಸಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಹೆಚ್.ಡಿ ದೇವೇಗೌಡ ಹಾಗೂ ಸದನದ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರನ್ನು ಕುರಿತಂತೆ ಒಂದು ಗುರುತರವಾದ ಆರೋಪವನ್ನು ಮಾಡಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಜನತಾ ದರ್ಶನದ ಪ್ರವಾಸಕ್ಕೆ ಹೊರಟಿದ್ದಾಗ ಮುಖ್ಯಮಂತ್ರಿಗಳ ಕಛೇರಿ ಬಾಗಿಲು ತೆರೆದಿದೆ ಎಂದು ಒಳಗೆ ನೋಡಿದರೆ ಸನ್ಮಾನ್ಯ ರೇವಣ್ಣನವರು ಮುಖ್ಯಮಂತ್ರಿಗಳ ಕುರ್ಚಿಯಲ್ಲಿ ಕುಳಿತುಕೊಂಡು ದೂರವಾಣಿ ಮೂಲಕ ಮತನಾಡುತ್ತಿದ್ದಾಗ ಇದನ್ನು ನೋಡಿ ಆಕ್ರೋಶಗೊಂಡು, ಆಶ್ಚರ್ಯಪಟ್ಟು, ಅವರ ಜವಾನನ್ನು ಯಾರು ಬೀಗ ಬಾಗಿಲು ತೆಗೆದನೋ ಅವನನ್ನು ಸಸ್ಪೆಂಡ್ ಮಾಡಿದ್ದಾರೆ ಎಂಬುದಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ ಆರೋಪಿಸಿರುತ್ತಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಹಾಗೂ ಶ್ರೀ ಹೆಚ್.ಡಿ. ರೇವಣ್ಣನವರು ಈ ಆರೋಪವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಹಾಗೂ ಶ್ರೀ ಹೆಚ್.ಡಿ ದೇವೇಗೌಡರು ಮಾತನಾಡಿ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಈ ಆರೋಪವನ್ನು ದಾಖಲೆಗಳ ಸಮೇತ ಸಾಭೀತತು ಮಾಡಬೇಕೇಂದು ಆಗ್ರಹಪಡಿಸಿರುತ್ತಾರೆ.

ದಿನಾಂಕ 8-8-1995 ರಂದು ತಮ್ಮ ಭಾಷಣವನ್ನು ಮುಂದುವರೆಸಿದ ಶ್ರೀ ಬಿ.ಎಸ್. ಯಡಿಯೂರಪ್ಪ ನಿನ್ನೆ ಪತ್ರಿಕಾ ವರದಿ ಮತ್ತು ಇತರ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ನಾನು ಮಾತಾನಾಡಿದ್ದು, ಮಾನ್ಯ ಸಭಾ ನಾಯಕರಿಗಾಗಲೀ, ಇತರ ಯಾರಿಗೇ ಆಗಲಿ ನೋವು ಆಗಿದ್ದರೆ, ಅದು ನನ್ನ ಉದ್ದೇಶವಾಗಿರಲಿಲ್ಲ.